ದಿನಾಂಕ 21.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಎ.ಬಿ.ಕೆ. ವಕೀಲರಿಂದಃ-**

ತನ್ನ ಪರವಾಗಿ ಸಾಕ್ಷ್ಯ ನುಡಿಯುವಂತೆ ದಿಃ 30.06.2023 ರಂದು ವಾದಿಯು ನನ್ನನ್ನು ಕರೆದಿರುತ್ತಾರೆ. ಈ ದಾವೆಯನ್ನು ವಾದಿಯು ಅರವಿನ್ ರವರ ಪತ್ನಿಯಾದ ಶಿಲ್ಪಾರವರ ವಿರುದ್ಧ ಹೂಡಿರುತ್ತಾರೆ. ವಾದಿ ಮತ್ತು ಅರವಿನ್ ರವರ ನಡುವೆ ಆದಂತಹ ಹಣಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತಾರೆ. ಸದರಿ ವಿಚಾರ ದಿಃ 30.06.2023 ರಂದು ನನಗೆ ಗೊತ್ತಾಗಿರುತ್ತದೆ. ಸಾಕ್ಷಿಯು ಮುಂದುವರೆದು, ಅರವಿನ್ ರವರು ಹಣವನ್ನು ವಾದಿಯಿಂದ ಪಡೆದುಕೊಳ್ಳುವ ಸಂದರ್ಭದಲ್ಲಿ ನಾನು ಸಹ ಇದ್ದೆನು ಎಂದು ಉತ್ತರಿಸಿರುತ್ತಾರೆ. ನಾನು ಅರವಿನ್ ರವರ ಕೋರಿಕೆಯ ಮೇರೆಗೆ ಅವರ ಜೊತೆ ಹೋಗಿದ್ದೆನು. ಸದರಿ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುತ್ತೇನೆ. ನಾನು ಅರವಿನ್ ರವರ ಕೋರಿಕೆಯ ಮೇರೆಗೆ ಅವರ ಜೊತೆ ಹೋಗಿದ್ದುದ್ದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು, ವಾದಿ ಮತ್ತು ಮೃತ ಅರವಿನ್ ಅಕ್ಕಪಕ್ಕದ ನಿವಾಸಿಗರು. ಅರವಿನ್ ರವರ ತಂದೆಯ ಬಗ್ಗೆ ಗೊತ್ತಿರುವುದಿಲ್ಲ. ನಮ್ಮ ಮನೆಯಿಂದ ಎರಡುವರೆ ಕಿಲೋ ಮೀಟರ್ ಅಂತರದಲ್ಲಿ ಅರವಿನ್ ರವರ ಮನೆ ಇದೆ. ಅರವಿನ್ ರವರ ತಂದೆ ಮಡಿಕೇರಿಯ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಸೇವಾವಧಿಯಲ್ಲಿ ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರವಿನ್ ರವರು ತಂದೆ-ತಾಯಿಯೊಂದಿಗೆ ಮಡಿಕೇರಿಗೆ ಯಾವಾಗ ಹೋಗಿ ನೆಲೆಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಅರವಿನ್ ರವರ ತಂದೆಗೆ ನಮ್ಮ ಗ್ರಾಮದಲ್ಲಿ ವಾಸದ ಮನೆ ಮತ್ತು ಜಮೀನುಗಳು ಇವೆ. ಅರವಿನ್ ರವರ ತಂದೆಯ ಮನೆಯೂ ಸಹ ಅಲ್ಲಿ ಇದೆ. ಅರವಿನ್‌ರವರ ತಂದೆಯು

ಜಮೀನುಗಳ ಉಸ್ತುವಾರಿಯನ್ನು ನೋಡಿಕೊಂಡು ಎಂದರೆ ನನಗೆ ಗೊತ್ತಿಲ್ಲ. ಅರವಿನ್ ರವರ ತಂದೆಗೆ 10 ರಿಂದ 15 ತೋಟಗಳು ಇವೆ ಎಂದರೆ ಇರಬಹುದು.

ನನಗೆ ಸರ್ವೆ ನಂ. 17/2 ಮತ್ತು 17/4 ರಲ್ಲಿ ಒಟ್ಟು ಹತ್ತು ಎಕರೆ ಜಮೀನು ಇದೆ. ಅರವಿನ್ ರವರ ಕಾಫಿ ಬೆಳೆ ಎಷ್ಟು ವರ್ಷದ್ದು ಎಂಬುದು ನನಗೆ ಗೊತ್ತಿಲ್ಲ. ನಮ್ಮ ಗ್ರಾಮ ಮತ್ತು ಅದರ ಅಕ್ಕಪಕ್ಕದ ಗ್ರಾಮಗಳಲ್ಲಿ ಉತ್ತಮ ಕಾಫಿ ಫಸಲು ಬರುತ್ತದೆ ಎಂದರೆ ಸರಿ. ಅರವಿನ್‌ರವರಿಗೆ ಇಬ್ಬರು ಸಹೋದರಿಯರು ಇದ್ದು, ಅವರಿಗೆ ವಿವಾಹವಾಗಿದೆ. ಅರವಿನ್ ರವರಿಗೆ ಪ್ರತಿವಾದಿಗಳು ಇಬ್ಬರೇ ವಾರಸುದಾರರೆಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ.

1 ನೇ ಪ್ರತಿವಾದಿಯು ಸಿ.ಐ.ಟಿ. ಕಾಲೇಜಿನಲ್ಲಿ ಮದುವೆಯಾದಾಗಿನಿಂದ ಕೆಲಸ ಮಾಡುತ್ತಿದ್ದಾರೆ. ಅರವಿನ್ ರವರ ತಾಯಿಯು ತನ್ನ ಗಂಡ ಮೃತರಾದ ಬಳಿಕ ಅರವಿನ್ ರವರ ಮನೆಗೆ ಬಂದು ನೆಲೆಸಿರುತ್ತಾರೆ. ಆದರೆ ಎಷ್ಟು ವರ್ಷಗಳಿಂದ ನೆಲೆಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅರವಿನ್ ರವರು ತನ್ನ ತಂದೆಯು ಮೃತರಾದ ಬಳಿಕ ಜಮೀನುಗಳ ಉಸ್ತುವಾರಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅರವಿನ್ ರವರ ತಾಯಿಗೆ ಪಿಂಚಣಿ ಬರುತ್ತಿತ್ತು. ಅರವಿನ್ ರವರು ಏಪ್ರಿಲ್ 2021 ರಂದು ಮೃತರಾಗಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಅರವಿನ್ ರವರ ಮೃತರಾದ ದಿನಾಂಕವನ್ನು ಅಂದಾಜಿನಲ್ಲಿ ತಿಳಿಸಿರುತ್ತೇನೆ. ಅರವಿನ್ ರವರು ದಿಃ 03.05.2021 ರಂದು ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರವಿನ್ ರವರು ಮಡಿಕೇರಿಯ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಅರವಿನ್ ರವರು ಮೃತರಾದ ಒಂದು ವಾರದ ಮಧ್ಯದಲ್ಲಿ ಅವರ ತಾಯಿ ಮೃತರಾಗಿರುತ್ತಾರೆ. ಅವರಿಬ್ಬರೂ ಮೃತರಾಗುವುದಕ್ಕಿಂತ ಮೊದಲು ಕಾನೂರಿನಲ್ಲಿ ಇದ್ದರು.

ಈ ದಾವೆಯನ್ನು ವಾದಿಯು ಅರವಿನ್ ರವರು ನೀಡಿದ ಚೆಕ್ಕಿನ ಆಧಾರದ ಮೇಲೆ ಹೂಡಿರುತ್ತಾರೆ. ಅರವಿನ್ ಚೆಕ್ಕನ್ನು ದಿಃ 03.01.2021 ರಂದು ವಾದಿಗೆ ಕೊಟ್ಟರು. ಆದರೆ ನಿಖರವಾಗಿ ವಾರ ನನಗೆ ನೆನಪಿಲ್ಲ. 2 ಚೆಕ್ಕುಗಳನು ಅರವಿನ್ ರವರು ವಾದಿಗೆ ಕಾನೂರು ಶಾಲಾ ಮೈದಾನದಲ್ಲಿ ನೀಡಿರುತ್ತಾರೆ. ಶಾಲಾ ಮೈದಾನ ನಮ್ಮ ಮನೆಯಿಂದ 1 ಕಿ.ಮೀ ಅಂತರದಲ್ಲಿದೆ. ಸದರಿ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುತ್ತೇನೆ. ದಿಃ 03.01.2021 ರಂದು ಅರವಿನ್ ರವರು ಕಾನೂರಿನ ಶಾಲಾ ಮೈದಾನದಲ್ಲಿ ನನ್ನ ಸಮಕ್ಷಮ ವಾದಿಗೆ 2 ಚೆಕ್ಕುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರವಿನ್ ರವರು ಚೆಕ್ಕುಗಳನ್ನು ವಾದಿಗೆ ನೀಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗಳ ಮನೆಗೆ ಜೂನ್ 2021 ರಲ್ಲಿ ಹೋಗಿರುತ್ತೇನೆ. ನಿಖರವಾದ ದಿನಾಂಕ ನನಗೆ ಈಗ ಹೇಳಲಾಗುವುದಿಲ್ಲ. ನಂತರ ನಾನು ಪ್ರತಿವಾದಿಗಳ ಮನೆಗೆ ಹೋಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 3 ರಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಾನು ಪಿ.ಯು.ಸಿ.ವರೆಗೆ ವ್ಯಾಸಂಗ ಮಾಡಿರುತ್ತೇನೆ. ಹಣದ ವ್ಯವಹಾರವು ವಾದಿಯ ಮನೆಯ ಹತ್ತಿರ ಆಗಿರುವುದಾಗಿ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ಮೃತ ಅರವಿನ್ ರವರ ಮಗ ಕಾಲ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಆರ್ಥಿಕವಾಗಿ ಸದೃಢರಾಗಿರುವವರು ಮಾತ್ರ ಕಾಲ್ಸ್ ಶಾಲೆಯಲ್ಲಿ ಮಕ್ಕಳನ್ನು ಓದಿಸುತ್ತಾರೆ ಎಂದರೆ ಇರಬಹುದು. ಯಾವ ತರಗತಿಯಿಂದ ಅವರ ಮಗ ಓದುತ್ತಿದ್ದಾನೆ ಎಂಬುದು ನನಗೆ ಗೊತ್ತಿಲ್ಲ. ಶಾಲೆಗಳಲ್ಲಿ ಶಾಲಾ ಶುಲ್ಕವನ್ನು 2 ಕಂತುಗಳಲ್ಲಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಒಂದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ, ಮತ್ತೊಂದು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಎಂದರೆ ಇರಬಹುದು. ನನ್ನ ಮತ್ತು ವಾದಿಯ ನಡುವೆ ಯಾವುದೇ ಹಣದ ವ್ಯವಹಾರ

ಇರುವುದಿಲ್ಲ. ನಾನು ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅರವಿನ್ ರವರು ವಾದಿಯಿಂದ ಯಾವುದೇ ಹಣವನ್ನು ಸಾಲವಾಗಿ ಪಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ಸಾಕ್ಷಿದಾರರ ಸಹಿ)**

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.